ಬಸ್ಸಿಲ್ಲದೆ ತೊಂದರೆಯಾಗಿರುವ ಬಗ್ಗೆ.

936(697) ಶ್ರೀಮತಿ ಸುಮಾ ವಸಂತ್(ವೀರಾಜಪೇಟೆ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸನ್ನು ವೀರಾಜಪೇಟೆ ತಾಲ್ಲೂಕು ಹೆರ್ಮಾಡುವರೆಗೆ ಓಡಿಸದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಾರ್ವಜನಿಕರಿಂದ ದೂರುಗಳು ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಈಗಿರುವ ಶ್ರೀಮಂಗಲದಿಂದ ಬಸ್ಸನ್ನು ಹೆರ್ಮಾಡುದಿಂದ ಬೆಂಗಳೂರು ಮತ್ತು ಬೆಂಗಳೂರುನಿಂದ ಶ್ರೀಮಂಗಲ ಮೂಲಕ ಹೆರ್ಮಾಡುವಿಗೆ ಬಸ್ಸನ್ನು ಮುಂದುವರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಭೀಮಣ್ಣ ಖಂಡ್ರೆ(ಸಾರಿಗೆ ಸಚಿವರು):-

ಅ) ಹೆರ್ಮಾಡ ವಲಯವು ಖಾಸಗಿ ವಲಯವಾಗಿದ್ದು ಖಾಸಗಿ ಮಾಲೀಕರು ಸಾರ್ವಜನಿಕರ ಬಸ್ಸಿನ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ಈ ವಿಷಯವನ್ನು ಪರಿಶೀಲಿಸಲಾಗುವುದು.

ಸಾರ್ವಜನಿಕರ ದೂರು ವಿಭಾಗಕ್ಕೆ ಬಂದ ಅರ್ಜಿಗಳು.

937(700) ಶ್ರೀಮತಿ ಸುಮಾ ವಸಂತ್(ವೀರಾಜಪೇಟೆ):- ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 1992 ಮತ್ತು 93 ಜನವರಿಗೆ ಸಾರ್ವಜನಿಕರಿಂದ ಸಾರ್ವಜನಿಕ ದೂರು ವಿಭಾಗಕ್ಕೆ ಎಷ್ಟು ಅರ್ಜಿಗಳು ಬಂದಿರುತ್ತವೆ?

2) ಈ ಅರ್ಜಿಗಳನ್ನು ಯಾವ ವಿಧದಲ್ಲಿ ಪರಿಶೀಲಿಸಲಾಗುವುದು?

3) ಈ ರೀತಿ ಕೊಟ್ಟ ಅರ್ಜಿಗಳಿಂದ ಸಾರ್ವಜನಿಕರ ಯಾವ ಯಾವ ಕೆಲಸ ಪೂರ್ಣಗೊಂಡಿರುತ್ತದೆ; ಇಲ್ಲವೇ ಕಡತಗಳಲ್ಲಿ ಯಾವ ಯಾವ ಹಂತದಲ್ಲಿದೆ?

4) ಇದರಲ್ಲಿ ಎಷ್ಟು ಹರಿಜನ ಗಿರಿಜನರಿಗೆ ಪ್ರಯೋಜನವಾಗಿದೆ?

ಶ್ರೀ ಪೆರಿಕಲ್.ಎಂ.ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ರಾಜ್ಯ ಸಚಿವರು):-

1) 51,162

2) ಅರ್ಜಿಗಳನ್ನು ವುಂಗಡಿಸಿ ಈ ಕೆಳಗಿನಂತೆ ಪರಿಶೀಲಿಸಲಾಗುವುದು.

ಅ) ಹೆಸರಿಲ್ಲದ ಮತ್ತು ಕೃತಕ ಹೆಸರಿನಿಂದ ಬರೆದ ದೂರುಗಳನ್ನು ತಳ್ಳಿಹಾಕಲಾಗುವುದು ಮತ್ತು ನಾಶಪಡಿಸಲಾಗುವುದು. ಆದರೂ ಕೊಟ್ಟ ದೂರುಗಳು ಸ್ಪಷ್ಟವಾಗಿದ್ದರೆ ಮತ್ತು ಪರಿಶೀಲನೆ ಮಾಡಲಾಗುವುದು:-

ಆ) ಕಾನೂನು ಸುವ್ಯವಸ್ಥೆ, ಹರಿಜನ ಮತ್ತು ದುರ್ಬಲ ವರ್ಗಗಳವರಿಗೆ ಅವಮಾನ ಮಾಡುವ ಅಥವಾ ಪೀಡಿಸುವ ಅಥವಾ ದೌರ್ಜನ್ಯಕ್ಕೊಳಪಡಿಸುವುದಕ್ಕೆ ಸಂಬಂಧಿಸಿದ ದೂರುಗಳು ಅತಿ ಜರೂರು ಸ್ವರೂಪದ್ದಾಗಿದ್ದ ಹೊರತು ಆರು ತಿಂಗಳಿಗಿಂತ ಹೆಚ್ಚಾಗಿ ಇತ್ಯರ್ಥವಾಗದೆ ಇರದ ವಿಷಯಗಳಿಗೆ ಸಂಬಂಧಿಸಲ್ಪಟ್ಟ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಮೇಲೆ ನಮೂದಿಸಿರುವ ಪ್ರಕರಣಗಳ ಜೊತೆಗೆ ಸಾರ್ವಜನಿಕ ಕುಂದು ಕೊರತೆಗಳ ನಿವಾರಣ ಸಂಸ್ಥೆಯು ಮತ್ತು ಜಿಲ್ಲಾ ಕುಂದು ಕೊರತೆಗಳ ನಿವಾರಣಾ ಅಧಿಕಾರಿಗಳು ಮೊದಲ ನೋಟದಲ್ಲಿಯೇ ಈ ಕೆಳಕಂಡ ಪ್ರಕರಣಗಳನ್ನು ಮಾನ್ಯ ಮಾಡುವುದಿಲ್ಲ.

1) ಸಕ್ರಮ ಪ್ರಾಧಿಕಾರದಿಂದ ಮೂಲ ಆದೇಶಗಳನ್ನು ನೀಡಲಾಗಿದ್ದ ಮತ್ತು ಅಪೀಲು ಮಾಡಿಕೊಳ್ಳುವುದಕ್ಕಾಗಿ ಅಥವಾ ಪರಿಹಾರಕ್ಕಾಗಿ ಉಪಬಂಧವಿರುವ ಶಾಸನ ಬದ್ಧ ಸ್ವರೂಪದ ಎಲ್ಲಾ ಪ್ರಕರಣಗಳು.

2) ಲೋಕಾಯುಕ್ತವು ಕ್ರಮ ಕೈಗೊಳ್ಳಬೇಕಾಗಿರುವ ಭ್ರಷ್ಟಾಚಾರ ಆಪಾದನೆಗಳು ಇತ್ಯಾದಿ.

3) ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇದ್ದು ಸಿವಿಲ್ ಅಥವಾ ಕ್ರಿಮಿನಲ್ ಕಾರ್ಯವಾಹಿಗಳಿಂದ ನಿವಾರಣೆ ಸಿಗಬೇಕಾಗಿರುವ ಪ್ರಕರಣಗಳು.

ಈ) ಮೇಲೆ ಹೇಳಿದಂತಹ ಪ್ರಕರಣಗಳ ಹೊರತು ಸಾರ್ವಜನಿಕರಿಂದ ಬಂದ ಮನವಿಗಳನ್ನು ಕುಂದು ಕೊರತೆ ನಿವಾರಣಾ ಸಂಸ್ಥೆಯು ಸ್ವೀಕರಿಸುವುದು. ಅರ್ಜಿಯನ್ನು ಸ್ಥಳೀಯ ಅಧಿಕಾರಿಯು ಇದಕ್ಕೆ ಮೊದಲು ಸ್ವೀಕರಿಸಿರುವುದನ್ನು ಮತ್ತು ಅಂತಹ ಅರ್ಜಿಗಳಿಗೆ ಸಾಕಷ್ಟು ಇಲ್ಲವೇ ಯಾವ ಗಮನವನ್ನೂ ನೀಡಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಅವುಗಳು ಕುಂದುಕೊರತೆಯ ಅರ್ಜಿಗಳನ್ನಾಗಿ ಸ್ವೀಕರಿಸಿ ಕ್ರಮ ಕೈಗೊಳ್ಳಲಾಗುವುದು.

ಉ) ಸಂಸ್ಥೆಯು ವ್ಯವಹರಿಸದ ದೂರುಗಳನ್ನು ಅಗತ್ಯ ಕ್ರಮಗಳಿಗಾಗಿ ಮೂಲ ಪ್ರತಿಯೊಂದಿಗೆ ಸಂಬಂಧಪಟ್ಟ ಇಲಾಖೆಗೆ ವರ್ಗಾಯಿಸಲಾಗುವುದು ಮತ್ತು ಆ ಬಗ್ಗೆ ಅರ್ಜಿದಾರರಿಗೆ ತಿಳಿಸಲಾಗುವುದು. ಸಂಬಂಧಿಸಿದ ಇಲಾಖೆಯು ಕೈಗೊಂಡ ಕ್ರಮದ ಫಲಿತಾಂಶವನ್ನು ಫಿರ್ಯಾದುದಾರರಿಗೆ ಆದಷ್ಟು ಬೇಗನೆ ತಿಳಿಸ ಬೇಕೆಂದು ಆ ಇಲಾಖೆಗೆ ವಿನಂತಿಸಲಾಗುವುದು.

3) 1992 ಜನವರಿಯಿಂದ 1993 ಜನವರಿಯವರೆಗೆ ಸ್ವೀಕರಿಸಿದ ಒಟ್ಟು ಅರ್ಜಿಗಳಲ್ಲಿ 1882 ಅರ್ಜಿಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಬಾಕಿ ಇರುತ್ತವೆ. ಉಳಿದ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

4) ಸಾರ್ವಜನಿಕ ಕುಂದು ಕೊರತೆಗಳ ವಿಭಾಗದಲ್ಲಿ ಅರ್ಜಿದಾರರಿಂದ ಸ್ವೀಕರಿಸುವ ಅರ್ಜಿಗಳಲ್ಲಿ ಅವರ ಜಾತಿ ಅಂದರೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದವರೆಂಬ ಮಾಹಿತಿಯನ್ನು ಎಲ್ಲರೂ ನೀಡಿರುವುದಿಲ್ಲ. ಆದ್ದರಿಂದ ಜಾತಿವಾರು ಮಾಹಿತಿ ಲಭ್ಯವಿರುವುದಿಲ್ಲ.

ಕರ್ನಾಟಕ ಅಲ್ಪಸಂಖ್ಯಾತರ ಆಯೋಗಕ್ಕೆ ಇಲಾಖೆಗಳಿಂದ ಮಾಹಿತಿಯನ್ನು ಕೇಳಲು ಶಾಸನಬದ್ಧ ಅಧಿಕಾರ

938(771) ಶ್ರೀ.ಎ.ಎಂ.ಹಿಂಡಸ್‌ಗೇರಿ(ಹುಬ್ಬಳ್ಳಿ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಅಲ್ಪಸಂಖ್ಯಾತರ ಆಯೋಗಕ್ಕೆ ಕೇಳಲು ಶಾಸನಬದ್ಧ ಅಧಿಕಾರವನ್ನು ಕೋಡಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಆಯೋಗಕ್ಕೆ ಶಾಸನಬದ್ಧ ಅಧಿಕಾರವನ್ನು ಕೋಡುವ ಪ್ರಸ್ತಾಪ ಇದೆಯೇ?

ಶ್ರೀ.ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ

ಆ) ಇಲ್ಲ

ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮಿಾಸಲಿಟ್ಟಿರುವ 15 ಅಂಕಗಳ ಬಗ್ಗೆ.

939 (262) ಶ್ರೀ ಜೆ.ಸಿ.ಮಾಧುಸ್ವಾಮಿ.(ಚಿಕ್ಕನಾಯಕನಹಳ್ಳಿ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಹುದ್ದೆಗಳನ್ನು (ಎರಡನೆ ದರ್ಜೆಯಿಂದ ಕೆಳಪಟ್ಟು)ಕೊಡುವ ಕಾಲದಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮಿಾಸಲಿಟ್ಟಿದ್ದ ಪ್ರತಿಶತ 15 ಅಂಕಗಳನ್ನು ಸರ್ಕಾರ ಪರಿಷ್ಕರಿಸಿದೆಯೇ ?

ಆ) ಹಾಗಾಗಿದ್ದಲ್ಲಿ, ಪ್ರತಿಶತ 15 ಅಂಕಗಳನ್ನು ಕೊಡಲಾಗುವುದೇ ಅಥವಾ ಒಟ್ಟು 15 ಅಂಕಗಳನ್ನು ಕೊಡಲಾಗುವುದೇ ?

ಇ) ಒಟ್ಟು 15 ಅಂಕಗಳಿಂದು ತೀರ್ಮಾನವಾಗಿದ್ದಲ್ಲಿ ಇದು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಮಾಡುವ ಅನ್ಯಾಯವಲ್ಲವೇ ?

ಈ) ಕಡೆಯ ಪಕ್ಷ ಪ್ರತಿಶತ 15 ಅಂಕಗಳನ್ನು ಕೊಡಲು ತೀರ್ಮಾನಿಸಲು ಸರ್ಕಾರಕ್ಕೆ ಇರುವ